**ಓ ಎಸ್ ನಂಃ 100/2015**
**ಪಿ.ಡಬ್ಲ್ಯೂ - 2**
**ದಿನಾಂಕಃ 02-07-2024**

**<u>ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಎನ್ ಎಸ್ ಎಸ್ ವಕೀಲರಿಂದಃ</u>**

ನಮ್ಮ ಅಜ್ಜ ಬಸಪ್ಪರವರ ತಂದೆ ಹೆಸರು ದೊಡ್ಡ ಪುಟ್ಟಪ್ಪ.ಬಸಪ್ಪರವರಿಗೆ 4 ಜನ ಹೆಣ್ಣು ಮಕ್ಕಳು ಹಾಗೂ ಒಬ್ಬ ಗಂಡು ಮಗು. ಅದರಲ್ಲಿ ಹಿರಿಯವರು ರುದ್ರಮ್ಮ ಎಂದರೆ ಸರಿ. ಈಗ ಅವರು ಜೀವಂತವಾಗಿಲ್ಲ . ಸುಮಾರು 3-4 ವರ್ಷಗಳ ಹಿಂದೆ ಅವರು ಮರಣ ಹೊಂದಿರುತ್ತಾರೆ. ಅವರಿಗೆ 4 ಜನ ಗಂಡು ಮಕ್ಕಳು ಮತ್ತು ಒಬ್ಬಳು ಮಗಳು ಇರುತ್ತಾರೆ. ಗಂಡು ಮಕ್ಕಳು ತುಮಕೂರಿನಲ್ಲಿ ವಾಸವಾಗಿದ್ದಾರೆ. ಹೆಣ್ಣು ಮಗಳು ಚಿಕ್ಕನಾಯಕನಹಳ್ಳಿಯಲ್ಲಿ ವಾಸವಿರುತ್ತಾರೆ. ರುದ್ರಮ್ಮನವರ ಮರಣಕ್ಕೆ ನಾನು ಹೋಗಿರುತ್ತೇನೆ.

2. ನನ್ನ ತಂದೆಯವರು ಮೈಸೂರಿನಲ್ಲಿ ವಾಸವಿರುತ್ತಾರೆ. ಬಸಪ್ಪನ ಹೆಣ್ಣು ಮಕ್ಕಳಿಗೆ ನನ್ನ ಅಜ್ಜನೇ ಮದುವೆ ಮಾಡಿಕೊಟ್ಟಿರುವ ವಿಚಾರ ನನಗೆ ಗೊತ್ತಿಲ್ಲ. ಆಗ ಆಗಿರುವ ಖರ್ಚುಗಳ ಬಗ್ಗೆಯೂ ಸಹ ನನಗೆ ಮಾಹಿತಿ ಇರುವುದಿಲ್ಲ. ನನ್ನ ತಾಯಿಯು ಸುಮಾರು 40 -45 ವರ್ಷಗಳ ಹಿಂದೆ ಹೊಸದುರ್ಗಕ್ಕೆ ಬಂದಿರುತ್ತಾರೆ. ಆಗ ನಾವೆಲ್ಲರೂ ಚಿಕ್ಕ ವಯಸ್ಸಿನವರು ಆಗ ನನ್ನ ತಾಯಿಗೆ ಯಾವುದೇ ಆದಾಯ ಇರಲಿಲ್ಲ ಎಂದರೆ ಸರಿಯಲ್ಲ. ಅವರು ಟೈಲರಿಂಗ್ ಮಾಡುತ್ತಿದ್ದರು. ಅದಕ್ಕೆ ಸಂಬಂಧಪಟ್ಟಂತ ದಾಖಲಾತಿಗಳು ಇರುವುದಿಲ್ಲ. ನನ್ನ ತಾಯಿ 40-45 ವರ್ಷಗಳ ಹಿಂದೆ ಬಂದಾಗ ಅವರ ಹೆಸರಿನಲ್ಲಿ ಯಾವುದೇ ಆಸ್ತಿಗಳು ಇರಲಿಲ್ಲ ಎಂದರೆ ಸರಿ.

3. ಈಗ ನಾವು ವಾಸವಾಗಿರುವಂತಹ ಮನೆಯ ಜಾಗವನ್ನು ನನ್ನ ಅಜ್ಜನಾದ ಬಸಪ್ಪನವರು ನನ್ನ ತಾಯಿಯ ಹೆಸರಿಗೆ ನೀಡಿರುತ್ತಾರೆ ಎಂದರೆ ಸಾಕ್ಷಿಯು ಸಂಪೂರ್ಣವಾಗಿ ನೀಡಿರುವುದಿಲ್ಲ ಅದರಲ್ಲಿ 13 x 20 ನ್ನು ಕ್ರಯಕ್ಕೆ ನೀಡಿರುತ್ತಾರೆ ಆದರೆ ನೋಂದಣಿ ಖರ್ಚನ್ನು ಉಳಿಸುವ ಸಲುವಾಗಿ ದಾನಪತ್ರ ಮಾಡಿಕೊಟ್ಟಿರುತ್ತಾರೆ. ಸಾಕ್ಷಿ ಮುಂದುವರೆದು ವಿಲ್ಲನ್ನು ಮಾಡಿರುತ್ತಾರೆ. ನನಗೆ ದಾನ ಪತ್ರ ಮತ್ತು ವಿಲ್ ಇವುಗಳ ನಡುವಿನ ವ್ಯಾತ್ಯಾಸ ತಿಳಿಯಲಿಲ್ಲ . ಮರಣ ಪ್ರಮಾಣ ಶಾಸನವನ್ನು ಯಾವ ಇಸವಿಯಲ್ಲಿ ಬರೆದಿರುತ್ತಾರೆ ಎಂದು ನನಗೆ ಹೇಳಲು ಸಾಧ್ಯವಿಲ್ಲ ದಾಖಲಾತಿಗಳನ್ನು ನೋಡಿ ಹೇಳಬಹುದು.

4. ಮರಣ ಶಾಸನವನ್ನು ಬರೆದುಕೊಡುವ ಮುಂಚೆಯೇ ಸದರಿ ಜಾಗದಲ್ಲಿ ನೀವು ಸ್ವಾಧೀನದಲ್ಲಿ ಇದ್ದೀರಿ ಎಂಬ ಪ್ರಶ್ನೆಗೆ ಸಾಕ್ಷಿಯು ಅದು ಖಾಲಿ ನಿವೇಶನವಾಗಿದ್ದು ಎಂದು ಹೇಳುತ್ತಾರೆ. ನಾವು ಮೈಸೂರಿನಿಂದ ಬಂದಾಗ ಖಾಲಿ ನಿವೇಶನದ ಮುಂಬಾಗದಲ್ಲಿರುವ ಮನೆಯಲ್ಲಿ ವಾಸವಾಗಿದ್ದೇವು. ಮರಣ ಶಾಸನ ಮಾಡಿಕೊಟ್ಟ ಸುಮಾರು 8 ವರ್ಷಗಳ ನಂತರ ನನ್ನ ಅಜ್ಜ ಮರಣಹೊಂದಿರುತ್ತಾರೆ. ಅವರು ಮರಣ ಹೊಂದಿದ ದಿನಾಂಕ ಅಥವಾ ಇಸವಿ ನನಗೆ ನೆನಪಿರುವುದಿಲ್ಲ. ಅವರ ಮರಣ ಪ್ರಮಾಣ ಪತ್ರವನ್ನು ನಾವು ಪಡೆದುಕೊಂಡಿರುತ್ತೇವೆ ಅದನ್ನು ನನ್ನ ಮಾವನಾದ ಜಯಣ್ಣನವರು ಪಡೆದುಕೊಂಡಿರುತ್ತಾರೆ. ಮನೆಯನ್ನು ಕಟ್ಟಲು ಸಂಬಂಧಪಟ್ಟ ಇಲಾಖೆಯಿಂದ ಪರವಾನಿಗೆಯನ್ನು ಪಡೆದುಕೊಂಡಿರುವುದಕ್ಕೆ ಸಂಬಂಧಿಸಿದಂತೆ ದಿನಾಂಕವನ್ನು ದಾಖಲಾತಿಗಳನ್ನು ನೋಡಿ ಹೇಳುತ್ತೇನೆ.

5. ಸದರಿ ಮರಣ ಶಾಸನಕ್ಕೆ ನನ್ನ ಮಾವ ಜಯಣ್ಣ ಸಾಕ್ಷಿ ಹಾಕಿರುತ್ತಾರೆ ಮತ್ತು ಕರಿಯಪ್ಪ ಎನ್ನುವವರು ಬರೆದಿರಬಹುದು. ಜಯಣ್ಣನವರ ಜೊತೆಗೆ ಇನ್ನೂ ಒಬ್ಬರು ಸಹಿ ಹಾಕಿರುತ್ತಾರೆ. ಆದರೆ ಅವರು ಯಾರು ಎಂದು ನನಗೆ ಈಗ ನೆನಪಿರುವುದಿಲ್ಲ. ನನ್ನ ಅಜ್ಜ ನನ್ನ ತಾಯಿಯ ಹೆಸರಿಗೆ ಯಾವುದೇ ಮರಣ ಶಾಸನವನ್ನು ಬರೆದುಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ಅದಕ್ಕೆ ಜಯಣ್ಣನವರು ಸಹಿ ಹಾಕಿರುವುದಿಲ್ಲ ಎಂದರೆ ಸರಿಯಲ್ಲ . ಮರಣ ಶಾಸನದ ಮೂಲ ಪ್ರತಿಯನ್ನು ಶ್ರೀಗುರು ಒಪ್ಪತ್ತಿನ ಸ್ವಾಮಿ ಸಹಕಾರ ಸಂಘ ಬ್ಯಾಂಕಿನಲ್ಲಿ ಸಾಲ ಪಡೆಯುವ ಸಲುವಾಗಿ ಇಟ್ಟಿರುತ್ತೇನೆ.

6. ನನ್ನ ಅಜ್ಜನವರು ನಮಗೆ ನೀಡಿರುವಂತಹ ಸ್ವತ್ತಿನ ಅಸೆಸ್ ಮೆಂಟ್ ನಂಬರ್ 1578/1561/1250-A ಎಂದರೆ ಸಾಕ್ಷಿಯು ದಾಖಲಾತಿಗಳನ್ನು ನೋಡಿ ಹೇಳಬಹುದು ನನಗೆ ಜ್ಞಾಪನಾ ಇರುವುದಿಲ್ಲ. ನಾನು ವಾಸವಾಗಿರುವ ಮನೆಯ ದಾಖಲಾತಿಗಳನ್ನು ಈ ನ್ಯಾಯಾಲಯದಲ್ಲಿ ಹಾಜರುಪಡಿಸಿರುವುದಿಲ್ಲ ಏಕೆಂದರೆ ಅದನ್ನು ಈ ದಾವೆಯಲ್ಲಿ ಸೇರಿಸಿರುವುದಿಲ್ಲ. ಸದರಿ ಮನೆಯು ನನ್ನ ಅಜ್ಜನವರು ನಮಗೆ ಪಿತ್ರಾರ್ಜಿತವಾಗಿ ನೀಡಿದ ಸ್ವತ್ತಾಗಿದ್ದು, ಅದನ್ನು ಈ ದಾವೆಯಲ್ಲಿ ಸೇರಿಸಿರುವುದಿಲ್ಲ ಎಂದರೆ ಸಾಕ್ಷಿಯು ನಮ್ಮ ಅಜ್ಜನವರಿಂದ ಕ್ರಯಕ್ಕೆ ಪಡೆದುಕೊಂಡ ಕಾರಣ ಸೇರಿಸಿರುವುದಿಲ್ಲ ಎಂದು ಹೇಳುತ್ತಾರೆ.ಸದರಿ ಸ್ವತ್ತನ್ನು ನನ್ನ ತಾಯಿಯವರಿಗೆ ಅವರ ಹಿಸ್ಸೆಯ ಭಾಗವಾಗಿ ಮಾಡಿರುತ್ತಾರೆ ಎಂದರೆ ಸರಿಯಲ್ಲ.

7. ಅಸೆಸ್ ಮೆಂಟ್ ನಂಬರ್ 1578/1561/1250-A ಇವುಗಳನ್ನು ಹೊರತುಪಡಿಸಿ ನೀವು ಬೇರೆ ಸ್ವತ್ತಿನಲ್ಲಿ ಸ್ವಾದೀನದಲ್ಲಿ ಇಲ್ಲ ಎಂದರೆ ಸರಿಯಲ್ಲ. ನಾವು ವಾಸವಾಗಿರುವ ಮನೆಯನ್ನು ಸೇರಿ ಮನೆಯ ಮುಂಭಾಗದಲ್ಲಿರುವಂತಹ ಜಾಗವು ಸಹ ನಮ್ಮ ಸ್ವಾಧೀನದಲ್ಲಿಯೇ ಇರುತ್ತದೆ. ಅದರ ಅಸಸ್ ಮೆಂಟ್ ನಂಬರ್ ನನಗೆ ಗೊತ್ತಿಲ್ಲ. ಬಸಪ್ಪ ನವರ ಮರಣದ ನಂತರ ಸದರಿ ಜಾಗವು ಜಯಣ್ಣನವರಿಗೆ ಪೌತಿಯಾಗಿ ಬಂದಿರುತ್ತದೆ. ಅದಕ್ಕೆ ಕಂದಾಯವನ್ನು ನಾನೇ ಸ್ವತಃ ಕಟ್ಟಿರುವುದಿಲ್ಲ ಅದು ಒಟ್ಟು ಕುಟುಂಬದ ಸ್ವತ್ತಾಗಿದ್ದು, ಒಟ್ಟಾಗಿ ಕಟ್ಟಿರುತ್ತೇವೆ. ನನ್ನ ತಾಯಿ ಮತ್ತು ಜಯಣ್ಣನವರು ಒಟ್ಟಾಗಿ ಸೇರಿ ಕಟ್ಟಿರುತ್ತಾರೆ. ಆ ದಾಖಲಾತಿಗಳು ಜಯಣ್ಣನವರ ಬಳಿ ಇರುತ್ತದೆ.

8. ನನ್ನ ಅಜ್ಜನವರು ನನ್ನ ತಾಯಿಗೆ ನೀಡಲಾದ ನಿವೇಶನದ ಚೆಕ್ಕು ಬಂದಿಯು ಪೂರ್ವಕ್ಕೆ ಮಸೀದಿ ಗೋಡೆ ಮತ್ತು ಪುರಸಭೆ ಚರಂಡಿ, ಪಶ್ಚಿಮಕ್ಕೆ ಜಯಣ್ಣ ನವರ ಹೆಸರಿನಲ್ಲಿರುವ ಖಾಲಿ ನಿವೇಶನ, ಉತ್ತರಕ್ಕೆ ಬೆಲ್ಲದ ಬಸಣ್ಣನವರ ಖಾಲಿ ನಿವೇಶನ, ದಕ್ಷಿಣಕ್ಕೆ ಜಯಣ್ಣನವರ ಉಳಿದ ಭಾಗದ ಖಾಲಿ ನಿವೇಶನ ಬರುತ್ತದೆ. ನಾನು ಇನ್ನೊಂದು ನಿವೇಶನವನ್ನು ಖರೀದಿ ಮಾಡಿದ್ದು, ಅದು ಪೂರ್ವ ಪಶ್ಚಿಮ 100 ಅಡಿ ಹಾಗೂ ಉತ್ತರ ದಕ್ಷಿಣ 7 ಅಡಿ ಇರುತ್ತದೆ. ಆ ಸ್ವತ್ತನ್ನು ನಾನು 1 ನೇ ಪ್ರತಿವಾದಿ ಜಯಣ್ಣನಿಂದ ಖರೀದಿ ಮಾಡಿರುತ್ತೇನೆ. ನನ್ನ ತಾಯಿಯ ಹೆಸರಿಗೆ ಖರೀದಿ ಮಾಡಿರುತ್ತೇನೆ. ಅದನ್ನು ನಾನು ಯಾವಾಗ ಖರೀದಿ ಮಾಡಿರುತೇನೆ ದಾಖಲಾತಿ ನೋಡಿ ಹೇಳಲು ಮಾತ್ರ ಸಾಧ್ಯ ಆಗ ನನಗೆ ಅಂದಾಜು 40-42 ವರ್ಷವಾಗಿರಬಹುದು. ನಾನು ಎಷ್ಟು ಹಣ ನೀಡಿ ಖರೀದಿಸಿರುತ್ತೇನೆ ಎಂದು ಪತ್ರ ನೋಡಿಯೇ ಹೇಳಬೇಕಾಗುತ್ತದೆ.

<u>ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು ನೀಡಿ ಮುಂದೂಡಲಾಯಿತು.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇದೆ

ಅಪರ ಸಿವಿಲ್ ಮತ್ತು ಜೆ ಎಂ ಎಫ್ ಸಿ
ನಾಯ್ಯಾಧೀಶರು, ಹೊಸದುರ್ಗ.